**BHARATH INSTITUTE OF SCHOOLING EDUCATION®**
Approved and Recognised by Government of Karnataka
An ISO 9001 - 2015 certified Organisation

**ಸಂಖ್ಯೆ: BISE/SSC-12th CLASS/NOTIFICATION/04/2023-2024** **ದಿನಾಂಕ: 03.05.2023**

## ಅಧಿಸೂಚನೆ

**ವಿಷಯ:- 2023-2024ರ ಅಕ್ಟೋಬರ್/ ನವೆಂಬರ್ ತಿಂಗಳಿನಲ್ಲಿ ನಡೆಸಲಾಗುವ ಸಿನಿಯರ್ ಸೆಕೆಂಡರಿ {(Senior Secondary)(12ನೇ ತರಗತಿ)} ಪರೀಕ್ಷೆಗೆ ನೊಂದಾಯಿಸಿಕೊಳ್ಳುವ ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.**

**ಉಲ್ಲೇಖ:1. ಸರ್ಕಾರಿ ಆದೇಶ ಸಂಖ್ಯೆ-ಇ ಕ್ರಮಾಂಕ: ಇಡಿ248/ಯುಆರ್ ಸಿ/2021 ದಿನಾಂಕ: 28.11.2022**
**2. ಸರ್ಕಾರಿ ಆದೇಶ ಸಂಖ್ಯೆ- ಇ ಕ್ರಮಾಂಕ: ಇಡಿ 248/ಯುಆರ್ ಸಿ/2021 ದಿನಾಂಕ: 25.11.2021**
**3. ಕರಾಉಶಿಪ/86/ಮುಕ್ತ ಶಾಲೆ/2021-22/526, ದಿನಾಂಕ: 29.10.2021**

******

ಶಾಲೆ ಬಿಟ್ಟ ಮಕ್ಕಳಿಗೆ ಹಾಗೂ ನಾನಾ ಕಾರಣಗಳಿಂದ ಶಾಲೆಯಲ್ಲಿ ವ್ಯಾಸಂಗ ಮಾಡಲು ಸಾಧ್ಯವಾಗದೆ ಇರುವ ಮಕ್ಕಳಿಗೆ ವಿಶೇಷವಾಗಿ ಹೆಣ್ಣು ಮಕ್ಕಳು, ಮಹಿಳೆಯರು, ಗ್ರಾಮೀಣ ಯುವಕರು ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದವರು, ಪ್ರೌಢ ಶಿಕ್ಷಣ, ಪದವಿ ಪೂರ್ವ ಶಿಕ್ಷಣ ಹಾಗೂ ಪದವಿ ಶಿಕ್ಷಣ ಪಡೆಯಲು ಅನುವು ಮಾಡಿಕೊಡುವ ಸಲುವಾಗಿ ಪುನಃ ಇವರನ್ನು ಶಿಕ್ಷಣದ ಮುಖ್ಯವಾಹಿನಿಗೆ ಕರೆತರುವ ಕೆಲಸವನ್ನು ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು, ಸಂಸ್ಥೆಯಿಂದ ಪ್ರಾರಂಭಿಸಿರುತ್ತೇವೆ. ಶೈಕ್ಷಣಿಕ ಮತ್ತು ಆರ್ಥಿಕ ಪ್ರಗತಿ ಹೊಂದಿದ ನಂತರವು ಕೂಡ ಇನ್ನೂ ಹೆಚ್ಚಿನ ಸಂಖ್ಯೆಯ ಯುವಕ ಯುವತಿಯರು ಮತ್ತು ವಯಸ್ಕರು, ಸಾಮಾಜಿಕ, ಆರ್ಥಿಕ, ಭೌಗೋಳಿಕ ಕಾರಣಗಳಿಂದ ಶಿಕ್ಷಣ ವಂಚಿತರಾಗಿದ್ದಾರೆ. ಇಂತಹ ಸಮಸ್ಯೆಗಳ ಪರಿಹಾರದ ಸಲುವಾಗಿ "ರಾಷ್ಟ್ರೀಯ ಶಿಕ್ಷಣ ನೀತಿ 1986" ರನ್ವಯ, "ಶಿಕ್ಷಣ ಅಧಿನಿಯಮ ಕಾಯ್ದೆ, 1983" ರಂತೆ ಶಿಕ್ಷಣದ ಅಭಿವೃದ್ಧಿ ಸಲುವಾಗಿ ಈ ಸ್ವಯಂ ಸೇವಾ ಸಂಸ್ಥೆಯನ್ನು ರಚಿಸಿದ್ದು, ನಮ್ಮ ಸಂಸ್ಥೆಯು "MHRD CR Act 1957/3758/2018/CO/L" ನೋಂದಣಿಯಾಗಿರುತ್ತದೆ. "Niti Aayog" ನಲ್ಲಿ ನಮ್ಮ ಸಂಸ್ಥೆಯು KA/2018/018757 ರಂತೆ ನೋಂದಣಿಯಾಗಿರುತ್ತದೆ. ಮತ್ತು "Ministry of Social Justice and Empowerment" ನಲ್ಲೂ ಸಹ ನಮ್ಮ ಸಂಸ್ಥೆಯು ನೋಂದಾಯಿಸಿಕೊಂಡಿರುತ್ತದೆ. ಹಾಗೂ ISO-9001-2015 ರಿಂದ ದೃಢೀಕರಣ ಸಂಸ್ಥೆಯಾಗಿರುತ್ತದೆ.

ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು, ಸಂಸ್ಥೆಯು ಶಿಕ್ಷಣ ವಂಚಿತ ವಿದ್ಯಾರ್ಥಿಗಳಿಗೆ ಅನೌಪಚಾರಿಕ ಶಿಕ್ಷಣ ಪದ್ಧತಿಯಲ್ಲಿ ಪ್ರೌಢ ಶಿಕ್ಷಣ, ಪದವಿ ಪೂರ್ವ ಶಿಕ್ಷಣ ಹಾಗೂ ಕೌಶಲ್ಯ ತರಬೇತಿ ಶಿಕ್ಷಣವನ್ನು ನೀಡುವ ಸಂಸ್ಥೆಗಳಲ್ಲಿ ಒಂದಾಗಿರುತ್ತದೆ. ಇದಕ್ಕೆ ಪೂರಕವಾಗಿ ಉಲ್ಲೇಖ (3) ರಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಇವರು ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು, ಸಂಸ್ಥೆಯವರು ನಡೆಸುವ ಮುಕ್ತ ಶಾಲೆಯಲ್ಲಿ 10+2 ತರಗತಿಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ರಾಜ್ಯದಲ್ಲಿನ ಪದವಿ ತರಗತಿಗಳಲ್ಲಿ ಪ್ರವೇಶ ಪಡೆಯಲು ಅನುಮತಿಸಬಹುದು ಮತ್ತು ಇದು N.E.P-2020 (National Education Policy-2020) ರ ಸದುದ್ದೇಶಗಳಿಗೆ ಪೂರಕವಾಗಿದೆ ಎಂದು ಉಲ್ಲೇಖ (3) ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ವರದಿ

BHARATH INSTITUTE OF SCHOOLING EDUCATION (R) Bangalore



+91 9513855009 | +91 9513585009
BISE, #52/2, Sharada Arcade, Maruthi Farm, Dombarahalli, Lakshmipura Post, Dasanapura Hobli, Bengaluru - 562162.
www.bise.edu.in Email : info@bise.edu.in

ಮಾಡಿರುತ್ತಾರೆ. ಇದರಂತೆ ಉಲ್ಲೇಖ (1) & (2) ರಲ್ಲಿ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳ ಕಾರ್ಯಾಲಯದಿಂದ ಈ ಹಿನ್ನೆಲೆಯಲ್ಲಿ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು ಇವರಿಂದ ನಡೆಸಲಾಗುತ್ತಿರುವ ಮುಕ್ತ ಶಾಲೆಯ ವಿದ್ಯಾರ್ಥಿಗಳಿಗೆ ರಾಜ್ಯದಲ್ಲಿನ ಉನ್ನತ ಶಿಕ್ಷಣ ವ್ಯಾಪ್ತಿಗೊಳಪಡುವ ಎಲ್ಲಾ ವಿಶ್ವ ವಿದ್ಯಾಲಯಗಳ ಅಧೀನದಲ್ಲಿ ಬರುವ ಪದವಿ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಉಲ್ಲೇಖ (1) & (2) ರ ಕರ್ನಾಟಕ ಸರ್ಕಾರ ಸಚಿವಾಲಯ ಪತ್ರದಲ್ಲಿ ಅನುಮತಿ (Eligibility) ನೀಡಿರುತ್ತಾರೆ.

ಉಲ್ಲೇಖಿತ ಸರ್ಕಾರಿ ಆದೇಶದನ್ವಯ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ), ಬೆಂಗಳೂರು ಸಂಸ್ಥೆಯು **2023 ರ ಅಕ್ಟೋಬರ್/ ನವೆಂಬರ್** ತಿಂಗಳಿನಲ್ಲಿ ನಡೆಸಲಾಗುವ ಸಿನಿಯರ್ ಸೆಕೆಂಡರಿ {Senior Secondary (12ನೇ ತರಗತಿ)} ಪರೀಕ್ಷೆಗೆ ನೊಂದಾಯಿಸಿಕೊಳ್ಳುವ ಅಭ್ಯರ್ಥಿಗಳ ಅರ್ಜಿಗಳನ್ನು ಆಹ್ವಾನಿಸಿದ್ದು, ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ), ಬೆಂಗಳೂರು ಸಂಸ್ಥೆಯ ಅಡಿಯಲ್ಲಿ ಬರುವ ಎಲ್ಲಾ ಕಲಿಕಾ ಕೇಂದ್ರಗಳ (ಕಾಲೇಜು/ಶಾಲಾ) ಮೂಲಕ ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

**I. ಅಭ್ಯರ್ಥಿಗಳನ್ನು ನೊಂದಾಯಿಸಿಕೊಳ್ಳಲು ಕಡ್ಡಾಯವಾಗಿ ಇರಬೇಕಾದ ಅರ್ಹತೆಗಳು ಹಾಗೂ ಸೂಚನೆಗಳು :**

1. ದಿನಾಂಕ 30.04.2023 ಕ್ಕೆ 17 ವರ್ಷಗಳು ತುಂಬಿರಬೇಕು (30.04.2006 ಕ್ಕಿಂತ ಹಿಂದೆ ಜನಿಸರಬೇಕು)
2. ಕರ್ನಾಟಕದಲ್ಲಿ ಎಸ್.ಎಸ್.ಎಲ್.ಸಿ/ ಸಿ.ಬಿ.ಎಸ್.ಇ / ಐ.ಸಿ.ಎಸ್.ಇ / ಎನ್.ಐ.ಒ.ಎಸ್ ಗಳಲ್ಲಿ ವ್ಯಾಸಂಗ ಮಾಡಿ ಹಾಗೂ 2022 ಜೂನ್ ಅಥವಾ ಅದಕ್ಕೂ ಹಿಂದಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು.
3. ಇತರೆ ರಾಜ್ಯಗಳ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ / 10ನೇ ತರಗತಿ ಪರೀಕ್ಷೆ ತೆಗೆದುಕೊಂಡು, ಪರೀಕ್ಷೆಗೆ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಥವಾ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿ ತೇರ್ಗಡೆ ಹೊಂದಿರಬೇಕು ಹಾಗೂ 2022 ಜೂನ್ ಅಥವಾ ಅದಕ್ಕೂ ಹಿಂದಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು.
4. 10ನೇ ತರಗತಿಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಮಾತ್ರ ಸಿನಿಯರ್ ಸೆಕೆಂಡರಿ {Senior Secondary (12ನೇ ತರಗತಿ)} ಗೆ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಅರ್ಹರಾಗಿರುತ್ತಾರೆ.
5. ಪ್ರಥಮ ಪಿ.ಯು.ಸಿ ಉತ್ತೀರ್ಣರಾದವರು ದ್ವಿತೀಯ ಪಿ.ಯು.ಸಿ. ಅನುತ್ತೀರ್ಣರಾದವರು, ಪರೀಕ್ಷೆಗೆ ಹಾಜರಾಗದವರು, ವ್ಯಾಸಂಗವನ್ನು ಮುಂದುವರಿಸದವರು, ಸಿನಿಯರ್ ಸೆಕೆಂಡರಿ {Senior Secondary(12ನೇತರಗತಿ)} ಪರೀಕ್ಷೆಗೆ ವಿದ್ಯಾರ್ಥಿಯಾಗಿ ತಮ್ಮ ಹೆಸರನ್ನು ನೋಂದಾಯಿಸಬಹುದಾಗಿದೆ.
6. ಕರ್ನಾಟಕ ರಾಜ್ಯದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ಐ.ಟಿ.ಐ, ಜೆ.ಓ.ಸಿ, ಡಿಪ್ಲೊಮೊ ಇತ್ಯಾದಿ ತರಗತಿಗಳಿಗೆ ದಾಖಲಾಗಿ ಅನುತೀರ್ಣಗೊಂಡು ಅಲ್ಲಿ ವ್ಯಾಸಂಗ ಮುಂದುವರಿಸದವರು ವಿದ್ಯಾರ್ಥಿಯಾಗಿ ತಮ್ಮ ಹೆಸರನ್ನು ನೋಂದಾಯಿಸಲು ಅರ್ಹರಾಗಿರುತ್ತಾರೆ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಬೇರೆ ಸಂಯೋಜನೆಯಲ್ಲಿ ಅಭ್ಯರ್ಥಿಯಾಗಿ ಸಿನಿಯರ್ ಸೆಕೆಂಡರಿ {Senior Secondary (12ನೇ ತರಗತಿ)}ಗೆ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ.

BHARATH INSTITUTE OF SCHOOLING EDUCATION(R) ★ Bangalore

7. ವಾಸಸ್ಥಳದ ಖಾತರಿಗಾಗಿ ವಾಸಸ್ಥಳದ ವಿಳಾಸ ವಿವರ ವಿರುವ ಈ ಕೆಳಗಿನ ಯಾವುದಾದರೂ ಒಂದು ದೃಢೀಕರಿಸಿದ ದಾಖಲೆಯನ್ನು ಸಲ್ಲಿಸುವುದು. (ಮತದಾರರ ಗುರುತು ಚೀಟಿ, ಪಡಿತರ ಚೀಟಿ, ಬ್ಯಾಂಕ್‌ಖಾತೆ ಪಾಸ್‌ಬುಕ್, ಡ್ರೈವಿಂಗ್ ಲೈಸನ್ಸ್.)

8.ವಿದ್ಯಾರ್ಥಿಗಳು ಆಧಾರ ಕಾರ್ಡ್ ದೃಢೀಕೃತ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ.

**II. ವಿದ್ಯಾರ್ಥಿಗಳು ಭಾಗ-1ರಲ್ಲಿ ಎರಡು ಭಾಷಾ ವಿಷಯಗಳನ್ನು ಹಾಗೂ ಭಾಗ-2 ರಲ್ಲಿ ಕಲಾ, ವಾಣಿಜ್ಯ ಸಂಯೋಜನೆಯಲ್ಲಿ ನಾಲ್ಕು ಐಚ್ಛಿಕ ವಿಷಯಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು.**

**ಭಾಗ-1 ಭಾಷೆಗಳು :**

| ಕ್ರ. ಸಂ. | ವಿಷಯ | Subject | ವಿಷಯ ಸಂಕೇತ(Code) |
|---|---|---|---|
| 1. | ಕನ್ನಡ | Kannada | B01 |
| 2. | ಇಂಗ್ಲೀಷ್ | English | B02 |
| 3. | ಹಿಂದಿ | Hindi | B03 |

**ಭಾಗ-2 ಐಚ್ಛಿಕ ವಿಷಯಗಳು :**

(ಭಾಗ- 2ರಲ್ಲಿ ಈ ಕೆಳಗೆ ನೀಡಿರುವ ವೃಂದಗಳಂತೆ ಮಾತ್ರ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕು)

**ಕಲಾ ಸಂಯೋಜನೆ:**

| ಕ್ರಸಂ | ವಿಷಯಗಳು ಹಾಗೂ ವಿಷಯ ಸಂಕೇತ ಸಂಖ್ಯೆ | | | | | | | |
|---|---|---|---|---|---|---|---|---|
| 1. | ಇತಿಹಾಸ | B21 | ಅರ್ಥಶಾಸ್ತ್ರ | B22 | ಸಮಾಜಶಾಸ್ತ್ರ | B28 | ರಾಜ್ಯಶಾಸ್ತ್ರ | B29 |

**ವಾಣಿಜ್ಯ ಸಂಯೋಜನೆ :**

| ಕ್ರಸಂ | ವಿಷಯಗಳು ಹಾಗೂ ವಿಷಯ ಸಂಕೇತ ಸಂಖ್ಯೆ | | | | | | | |
|---|---|---|---|---|---|---|---|---|
| 1. | ಇತಿಹಾಸ | B21 | ಅರ್ಥಶಾಸ್ತ್ರ | B22 | ವ್ಯವಹಾರ ಅಧ್ಯಯನ | B27 | ಲೆಕ್ಕಶಾಸ್ತ್ರ | B30 |

**Arts Combination:**

| Sl. No | Subjects & Subjects code Numbers | | | | | | | |
|---|---|---|---|---|---|---|---|---|
| 1. | History | B21 | Economics | B22 | Sociology | B28. | Political Science | B29 |

**Commerce Combination:**

| Sl. No | Subjects & Subjects code Numbers | | | | | | | |
|---|---|---|---|---|---|---|---|---|
| 1. | History | B21 | Economics | B22 | Business Studies | B27 | Accountancy | B30 |

BHARATH INSTITUTE OF SCHOOLING EDUCATION (R) ★ Bangalore

**ಮಾನದಂಡಗಳು:-**

1. ಪರೀಕ್ಷೆಯು ವಿದ್ಯಾರ್ಥಿಯ ಆಂತರಿಕ ಮೌಲ್ಯಮಾಪನ ಹಾಗೂ ಬಾಹ್ಯ ಪರೀಕ್ಷಾ ವಿಧಾನದಿಂದ ಕೂಡಿರಬೇಕು.
2. ಬಾಹ್ಯ ಪರೀಕೆಗೆ ಶೇ. 80 ಹಾಗೂ ಆಂತರಿಕ ಮೌಲ್ಯಮಾಪನಕ್ಕೆ ಶೇ. 20 ಅಂಕಗಳನ್ನು ಮೀಸಲಿಡತಕ್ಕದ್ದು.
3. ಎಲ್ಲಾ ವಿಷಯಗಳಲ್ಲಿ ಬಾಹ್ಯ ಪರೀಕ್ಷೆಗೆ ಒಟ್ಟು 480 ಅಂಕಗಳು ಮತ್ತು ಆಂತರಿಕ ಮೌಲ್ಯಮಾಪನಕ್ಕೆ 120 ಅಂಕಗಳನ್ನು ನಿಗದಿಪಡಿಸಿದೆ.

**ವಿಷಯವಾರು ಅಂಕಗಳ ವಿಂಗಡಣೆ ಕೆಳಕಂಡಂತಿದೆ.**

| ವಿಷಯಗಳು | ಬಾಹ್ಯ | ಆಂತರಿಕ | ಒಟ್ಟು |
|---|---|---|---|
| ಪ್ರಥಮ ಭಾಷೆ | 80 | 20 | 100 |
| ದ್ವಿತೀಯ ಭಾಷೆ | 80 | 20 | 100 |
| **ಕಲಾ ಮತ್ತು ವಾಣಿಜ್ಯ ವಿಷಯಗಳಿಗೆ** | | | |
| ಐಚ್ಛಿಕ ವಿಷಯ -1 | 80 | 20 | 100 |
| ಐಚ್ಛಿಕ ವಿಷಯ -2 | 80 | 20 | 100 |
| ಐಚ್ಛಿಕ ವಿಷಯ -3 | 80 | 20 | 100 |
| ಐಚ್ಛಿಕ ವಿಷಯ-4 | 80 | 20 | 100 |
| ಒಟ್ಟು | 480 | 120 | 600 |

**ವಿಷಯಗಳಿಗೆ ಗಳಿಸಿದ ಅಂಕಗಳ ಆಧಾರದ ಮೇಲೆ ನೀಡುವ ಶ್ರೇಣಿ.**

| ಶೇಕಡಾ | ಶ್ರೇಣಿ. |
|---|---|
| 60 ರಿಂದ 100 | ಪ್ರಥಮ ಶ್ರೇಣಿ. |
| 50 ರಿಂದ 59 | ದ್ವಿತೀಯ ಶ್ರೇಣಿ. |
| 35 ರಿಂದ 49 | ತೃತೀಯ ಶ್ರೇಣಿ. |

| **ವಿಶೇಷ ಸೂಚನೆ;-** |
|---|
| ಬಾಹ್ಯ ಪರೀಕ್ಷೆಯಲ್ಲಿ ಕಲಾ & ವಾಣಿಜ್ಯ ವಿಭಾಗದಲ್ಲಿ 6 ವಿಷಯಗಳಲ್ಲಿ ಪ್ರತಿ ವಿಷಯಕ್ಕೆ 80 ಅಂಕಗಳಿಗೆ ಕನಿಷ್ಠ 28 ಅಂಕಗಳನ್ನು ಪಡೆದಿರತಕ್ಕದ್ದು. ಒಟ್ಟಾರೆ ವಿದ್ಯಾರ್ಥಿಯು ತೇರ್ಗಡೆಯಾಗಲು ಬಾಹ್ಯ ಪರೀಕ್ಷೆಯ 480 ಅಂಕಗಳಿಗೆ ಕನಿಷ್ಠ 168 ಅಂಕಗಳನ್ನು (ಶೇ.35) ಪಡೆದಿರಬೇಕು |
| ವಿದ್ಯಾರ್ಥಿಯು ತೇರ್ಗಡೆಯಾಗಲು ಬಾಹ್ಯ ಪರೀಕ್ಷೆಯಲ್ಲಿ ಪ್ರತಿ ವಿಷಯದಲ್ಲಿ ಕನಿಷ್ಠ ಶೇ.30 ಹಾಗೂ ಬಾಹ್ಯ ಪರೀಕ್ಷೆಯ ಎಲ್ಲಾ ವಿಷಯಗಳ ಸರಾಸರಿ ಶೇ.35 ಆಗಿರಬೇಕು ಹಾಗೂ ಬಾಹ್ಯ ಪರೀಕ್ಷೆ ಮತ್ತು ಆಂತರಿಕ ಮೌಲ್ಯಮಾಪನದ ಎಲ್ಲಾ ವಿಷಯಗಳ ಸರಾಸರಿ ಶೇ.35 ಆಗಿರಬೇಕು. |
| ಆಂತರಿಕ ಅಂಕಗಳ ಹಂಚಿಕೆ:- ವಿದ್ಯಾರ್ಥಿಗಳಿಗೆ ನಿಯಮಾನುಸಾರ ನಿಗಧಿಯಾದ ದಿನಗಳ Contact Classes, (ಸಂಪರ್ಕ ತರಗತಿಗಳ) ನ ಹಾಜರಾತಿಗೆ 5 ಅಂಕಗಳು, ವಿದ್ಯಾರ್ಥಿಗಳಿಗೆ ನೀಡಿದ Assignment ನ ಪರಿಪೂರ್ಣ submission ಗೆ 5 ಅಂಕಗಳು ಹಾಗೂ Class Interaction ನಲ್ಲಿ ಗಳಿಸಿಕೊಳ್ಳುವ 10 ಅಂಕಗಳು ಒಟ್ಟು 20 ಅಂಕಗಳು (5+5+10=20) |

BHARATH INSTITUTE OF SCHOOLING EDUCATION(R) ★ Bangalore

## ವಿಶೇಷ ಸೂಚನೆಗಳು:-

1. ರೆಗ್ಯೂಲರ್ ಅಥವಾ ರಿಪೀಟರ್ ಅಭ್ಯರ್ಥಿಗಳಾಗಿ 2023 ರ ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಗೆ ಹಾಜರಾಗುವವರು ಸಿನಿಯರ್ ಸೆಕೆಂಡರಿ {Senior Secondary (12ನೇ ತರಗತಿ)} ವಿದ್ಯಾರ್ಥಿಗಳಾಗಿ ನೋಂದಾಯಿಸಿಕೊಳ್ಳುವುದನ್ನು ಕಡ್ಡಾಯವಾಗಿ ನಿಷೇದಿಸಲಾಗಿದೆ. ಒಂದು ವೇಳೆ ನೋಂದಾಯಿಸಿದಲ್ಲಿ (ಕಾಲೇಜು/ ಶಾಲಾ) ಕಲಿಕಾ ಕೇಂದ್ರಗಳ ಪ್ರಾಂಶುಪಾಲರ / ಮುಖ್ಯೋಪಾಧ್ಯಾಯರ /ಸಮನ್ವಯಾಧಿಕಾರಿಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.
2. ಸಿನಿಯರ್ ಸೆಕೆಂಡರಿ {Senior Secondary (12ನೇ ತರಗತಿ)}ವಿದ್ಯಾರ್ಥಿಯಾಗಿ ನೋಂದಾಯಿಸಿಕೊಳ್ಳಲು ಅರ್ಹವಲ್ಲದ ಅರ್ಜಿಯನ್ನು ಸಂಸ್ಥೆಯು ತಿರಸ್ಕರಿಸಿದಲ್ಲಿ ಪಾವತಿಸಿರುವ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ. ಇದಕ್ಕೆ ಕಲಿಕಾ ಕೇಂದ್ರಗಳ (ಕಾಲೇಜು/ಶಾಲಾ) ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು / ಸಮನ್ವಯಾಧಿಕಾರಿಗಳು ನೇರ ಜವಾಬ್ದಾರರಾಗುವರು ಮತ್ತು ಅವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.
3. ಸಿನಿಯರ್ ಸೆಕೆಂಡರಿ {Senior Secondary (12ನೇ ತರಗತಿ)} ವಿದ್ಯಾರ್ಥಿಯಾಗಿ ನೋಂದಾಯಿಸಿಕೊಳ್ಳುವಾಗ, ನೋಂದಾಯಿಸಿಕೊಳ್ಳುವ ಶಾಲಾ ಕಾಲೇಜಿನ ಕಲಿಕಾ ಕೇಂದ್ರಗಳಲ್ಲಿ ಭಾರತ್ ಇನ್ಸ್ಟಿಟ್ಯೂಟ್ ಆಫ್‌ಸ್ಕೂಲಿಂಗ್ ಎಜುಕೇಶನ್ (ರಿ), ಬೆಂಗಳೂರು ಸಂಸ್ಥೆಯು ನಿಗಧಿಪಡಿಸಿರುವ ವಿಷಯಗಳನ್ನು ಮಾತ್ರ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುವಂತೆ (ಕಾಲೇಜು/ಶಾಲಾ) ಕಲಿಕಾ ಕೇಂದ್ರಗಳ ಪ್ರಾಂಶುಪಾಲರು /ಮುಖ್ಯೋಪಾಧ್ಯಾಯರು / ಸಮನ್ವಯಾಧಿಕಾರಿಗಳು ಜವಾಬ್ದಾರಿ ವಹಿಸಬೇಕು.
4. ಭರ್ತಿ ಮಾಡಿದ ಅರ್ಜಿಗಳನ್ನು ಮತ್ತು ಸಂಬಂಧಿಸಿದ ದಾಖಲೆಗಳನ್ನು ನಿಗಧಿತ ದಿನಾಂಕದಂದು (ಶಾಲಾ/ಕಾಲೇಜು) ಕಲಿಕಾ ಕೇಂದ್ರಗಳ ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು ಸಮನ್ವಯಾಧಿಕಾರಿಗಳು ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ), ಬೆಂಗಳೂರು ಸಂಸ್ಥೆಯ ಕೇಂದ್ರ ಕಛೇರಿಗೆ ಸಲ್ಲಿಸಿ, ಸಲ್ಲಿಸಿದ ದಾಖಲೆಗಳಿಗೆ ಸ್ವೀಕೃತಿ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ.
5. ಸಿನಿಯರ್ ಸೆಕೆಂಡರಿ {Senior Secondary (12ನೇ ತರಗತಿ)} ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡ ಭಾಷಾ ಮತ್ತು ಐಚ್ಛಿಕ ವಿಷಯಗಳ ಬಗ್ಗೆ ಒಂದು ಪ್ರತ್ಯೇಕ ಮುಚ್ಚಳಿಕೆ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ. ಇದೊಂದು ಪ್ರಮುಖ ದಾಖಲೆಯಾಗಿದ್ದು, ಅರ್ಜಿಗಳ ಜೊತೆಯಲ್ಲಿ ತೆಗೆದುಕೊಳ್ಳುವುದು.
6. ವಿದ್ಯಾರ್ಥಿಗಳು ಅರ್ಜಿ ಮತ್ತು ಮುಚ್ಚಳಿಕೆ ಪತ್ರದಲ್ಲಿ ನಮೂದಿಸಿರುವ ಭಾಷಾ ಮತ್ತು ಐಚ್ಛಿಕ ವಿಷಯಗಳಲ್ಲಿ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುತ್ತದೆ. ಆಯ್ಕೆ ಮಾಡಿಕೊಂಡ ನಂತರ ಯಾವುದೇ ಕಾರಣಕ್ಕೂ ಭಾಷೆ ಮತ್ತು ಐಚ್ಛಿಕ ವಿಷಯಗಳ ಬದಲಾವಣೆಗೆ ಅವಕಾಶವಿರುವುದಿಲ್ಲ.
7. ವಿದ್ಯಾರ್ಥಿಗಳು ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ), ಬೆಂಗಳೂರು ಸಂಸ್ಥೆಯ ಅಡಿಯಲ್ಲಿ ಮಾನ್ಯತೆ ಪಡೆದುಕೊಂಡಿರುವ ಕಲಿಕಾ (ಕಾಲೇಜು/ಶಾಲಾ) ಕೇಂದ್ರಗಳಲ್ಲಿ ಮಾತ್ರ ಪ್ರವೇಶಾತಿ ಪಡೆದುಕೊಳ್ಳುವುದು ಹಾಗೆಯೇ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್

BHARATH INSTITUTE OF SCHOOLING EDUCATION (R) Bangalore

(ರಿ), ಬೆಂಗಳೂರು ಸಂಸ್ಥೆಯು ನಿಗಧಿಪಡಿಸಿರುವ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುತ್ತದೆ.

8. ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ), ಬೆಂಗಳೂರು ಸಂಸ್ಥೆಯ ಅಡಿಯಲ್ಲಿ ಬರುವ ಎಲ್ಲಾ ಕಲಿಕಾ ಕೇಂದ್ರಗಳ (ಶಾಲಾ/ಕಾಲೇಜು) ಮೂಲಕ ನೋಂದಾಯಿಸಿಕೊಂಡಿರುವ ಸಿನಿಯರ್‌ಸೆ ಕೆಂಡರಿ { **Senior Secondary** (12ನೇ ತರಗತಿ)} ವಿದ್ಯಾರ್ಥಿಗಳಿಗೆ **BISE** ಸಂಸ್ಥೆಯಿಂದ ನೀಡುವ ಕಲಿಕಾ ಸಾಮಾಗ್ರಿಗಳನ್ನು ಪ್ರತಿ ವಿದ್ಯಾರ್ಥಿಗಳಿಗೂ ಕಡ್ಡಾಯವಾಗಿ ವಿತರಿಸುವುದು (ಕಾಲೇಜು/ಶಾಲಾ) ಕಲಿಕಾ ಕೇಂದ್ರಗಳ ಪ್ರಾಂಶುಪಾಲರ/ ಮುಖ್ಯೋಪಾಧ್ಯಾಯರ / ಸಮನ್ವಯಾಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ. ಹಾಗೂ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಸಂಪರ್ಕ ತರಭೇತಿ ಪ್ರಾರಂಭಿಸುವ ಮೊದಲು ವಿತರಿಸುವುದು ಕಡ್ಡಾಯವಾಗಿರುತ್ತದೆ.

9. ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಾದ ಸಂಪರ್ಕ ತರಗತಿ ಮತ್ತು ಇತರೇ ಬೋಧನೆಗಳಿಗೆ ಬೇಕಾದ ಸ್ಥಳಾವಕಾಶ ಮತ್ತು ಪೂರಕ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಜವಾಬ್ದಾರಿ ಸಂಬಂಧಿಸಿದ (ಕಾಲೇಜು/ಶಾಲಾ) ಕಲಿಕಾ ಕೇಂದ್ರಗಳ ಪ್ರಾಂಶುಪಾಲರ / ಮುಖ್ಯೋಪಾಧ್ಯಾಯರ /ಸಮನ್ವಯಾಧಿಕಾರಿಗಳ ಪೂರ್ಣ ಜವಾಬ್ದಾರಿಯಾಗಿರುತ್ತದೆ. ವಿದ್ಯಾರ್ಥಿಗಳಿಂದ ಯಾವುದೇ ರೀತಿಯ ದೂರುಗಳು ಬಂದಲ್ಲಿ ತಾವೇ ನೇರ ಹೊಣೆಗಾರಾಗಿರುತ್ತೀರಿ ಹಾಗೂ ತಮ್ಮ (ಕಾಲೇಜು/ಶಾಲಾ) ಕಲಿಕಾ ಕೇಂದ್ರದ ಮಾನ್ಯತೆಯನ್ನು ರದ್ದುಗೊಳಿಸಲಾಗುವುದು.

10. ಸಿನಿಯರ್ ಸೆಕೆಂಡರಿ {**Senior Secondary** (12ನೇ ತರಗತಿ)} ಗೆ ನೋಂದಾಯಿಸಿಕೊಂಡು ವಿದ್ಯಾರ್ಥಿಗಳಿಗೆ ಕಲಿಕಾ ಕೇಂದ್ರಗಳ (ಕಾಲೇಜು /ಶಾಲಾ) ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು / ಸಮನ್ವಯಾಧಿಕಾರಿಗಳು ತಮ್ಮ ಕಲಿಕಾ ಕೇಂದ್ರಗಳಲ್ಲಿ ದಾಖಲಾದ ವಿದ್ಯಾರ್ಥಿಗಳಿಗೆ ನಿಗಧಿತ ಸಂಖ್ಯೆಯ ಸಂಪರ್ಕ ತರಭೇತಿಯನ್ನು (**Contact Class**) ನೀಡುವುದು ಕಡ್ಡಾಯವಾಗಿರುತ್ತದೆ.

11. ಸಿನಿಯರ್ ಸೆಕೆಂಡರಿ {**Senior Secondary** (12ನೇ ತರಗತಿ)} ಗೆ ನೋಂದಾಯಿಸಿಕೊಂಡು ವಿದ್ಯಾರ್ಥಿಗಳು ತಮಗೆ ನೀಡಿದ **Contact Classes, Assignment, class Interaction** ಗಳ ನಿಯಮವನ್ನು ಪಾಲಿಸಿದ ವಿದ್ಯಾರ್ಥಿಗಳಿಗೆ ಮಾತ್ರ ಗುರುತಿನ ಕಾರ್ಡ್, ಹಾಗೂ ಪರೀಕ್ಷಾ ಪ್ರವೇಶ ಪತ್ರಗಳನ್ನು ನೀಡಲಾಗುವುದು.

## III ವಿದ್ಯಾರ್ಥಿಗಳು ಅರ್ಜಿಯ ಜೊತೆಗೆ ಕಲಿಕಾ ಕೇಂದ್ರ (ಕಾಲೇಜು/ಶಾಲಾ) ಗಳಿಗೆ ಸಲ್ಲಿಸಬೇಕಾದ ದಾಖಲೆಗಳು:

1. ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮೂಲ (**Original**) ಉತ್ತೀರ್ಣ ಪ್ರಮಾಣ ಪತ್ರದೊಂದಿಗೆ ಎರಡು ಜೆರಾಕ್ಸ್ ದೃಢೀಕೃತ ಪ್ರತಿಗಳನ್ನು ಸಲ್ಲಿಸುವುದು.
2. ವಿದ್ಯಾರ್ಥಿಯು ಈ ಹಿಂದೆ ವ್ಯಾಸಂಗ ಮಾಡಿದ ಸಂಸ್ಥೆಯಿಂದ ಮೂಲ ವರ್ಗಾವಣೆ ಪತ್ರವನ್ನು (**Original Transfer Certificate**) ಪಡೆದು ನೀಡಬೇಕು.
3. ವಿದ್ಯಾರ್ಥಿಯು ಇತ್ತೀಚಿನ ಆರು (6) **passport size** ನ ಭಾವಚಿತ್ರಗಳನ್ನು (**Photo**) ಸಲ್ಲಿಸಬೇಕು. (**Passport Size** ಅಲ್ಲದೆ ಬೇರೆ ಸೈಜಿನ ಫೋಟೋವನ್ನು ಸಲ್ಲಿಸಬಾರದು ಅಂತಹ ಫೋಟೋವನ್ನು ತಿರಸ್ಕರಿಸಲಾಗುವುದು)

BHARATH INSTITUTE OF SCHOOLING EDUCATION(R) ★ Bangalore

4. ದ್ವಿತೀಯ ಪಿ.ಯ.ಸಿ. ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು, ದ್ವಿತೀಯ ಪಿ.ಯು.ಸಿ. ಮೂಲ ವರ್ಗಾವಣೆ ಪತ್ರ ಮತ್ತು ದ್ವಿತೀಯ ಪಿ.ಯು.ಸಿ. ಮೂಲ ಅನುತ್ತೀರ್ಣ ಅಂಕಪಟ್ಟಿಯನ್ನು ಸಲ್ಲಿಸಬೇಕು.
5. ವಿದ್ಯಾರ್ಥಿಯು ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಸಂಸ್ಥೆಯ ಮುಖ್ಯೋಪಾಧ್ಯಾಯರಿಂದ / ಪ್ರಾಂಶುಪಾಲರಿಂದ ದೃಢೀಕರಿಸಲ್ಪಟ್ಟ ಒಂದು ಭಾವಚಿತ್ರವನ್ನು ಎಸ್.ಎಸ್.ಎಲ್.ಸಿ. ಜೆರಾಕ್ಸ್ Marks card ಪ್ರತಿಗೆ ಅಂಟಿಸಿ ಸಲ್ಲಿಸಬೇಕು.
6. ಸ್ವವಿಳಾಸ ಬರೆದಿರುವ ಮತ್ತು ಅಂಚೆ ಚೀಟಿ ಅಂಟಿಸಿರುವ ಎರಡು ಪೋಸ್ಟಲ್ ಲಕೋಟೆಗಳನ್ನು ನೀಡಬೇಕು. (ಈ ಲಕೋಟೆಗಳನ್ನು ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳು ವಿದ್ಯಾರ್ಥಿಗಳಿಗೆ ಯಾವುದೇ ಮಾಹಿತಿ ತಿಳಿಸುವ ಅಥವಾ ಅವರಿಂದ ತರಿಸಿಕೊಳ್ಳುವ ಉದ್ದೇಶಕ್ಕೆ ಬಳಸಿಕೊಳ್ಳುವುದು).
7. ವಿದ್ಯಾರ್ಥಿಯು ದೃಢೀಕೃತ ಆಧಾರ್‌ಕಾರ್ಡ್ ಪ್ರತಿ ಸಲ್ಲಿಸುವುದು.

## IV. ಕಲಿಕಾ ಕೇಂದ್ರಗಳ (ಕಾಲೇಜು/ಶಾಲಾ) ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು / ಸಮನ್ವಯಾಧಿಕಾರಿಗಳು ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಳ್ಳುವಾಗ ವಿಶೇಷವಾಗಿ ಗಮನಹರಿಸರಿಸಬೇಕಾದ ಅಂಶಗಳು:

1. ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಳ್ಳುವಾಗ (ಕಾಲೇಜು/ಶಾಲಾ) ಕಲಿಕಾ ಕೇಂದ್ರಗಳ ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು /ಸಮನ್ವಯಾಧಿಕಾರಿಗಳು ಸಂಸ್ಥೆಯ ಪ್ರವೇಶಾತಿಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನೀಡುವುದು
2. ವಿದ್ಯಾರ್ಥಿಗಳ ಅರ್ಜಿ ನಮೂನೆಗಳನ್ನು ಎಚ್ಚರಿಕೆಯಿಂದ ಭರ್ತಿ ಮಾಡಿ ನಿಗಧಿತ ದಿನಾಂಕದೊಳಗೆ (ಕಾಲೇಜು/ಶಾಲಾ) ಕಲಿಕಾ ಕೇಂದ್ರಗಳ ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು / ಸಮನ್ವಯಾಧಿಕಾರಿಗಳು Online Portal ನಲ್ಲಿ Upload ಮಾಡಬೇಕು.
3. ಕಲಿಕಾ ಕೇಂದ್ರಗಳ (ಕಾಲೇಜು/ಶಾಲಾ) ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು / ಸಮನ್ವಯಾಧಿಕಾರಿಗಳು ವಿದ್ಯಾರ್ಥಿಗಳಿಗಾಗಿಯೇ ಪ್ರತ್ಯೇಕ ಸಂಪರ್ಕ ತರಗತಿಗಳ ಹಾಜರಾತಿ ವಹಿಯನ್ನು (Attendance Register) ಮತ್ತು ದಾಖಲಾತಿ ವಹಿಯನ್ನು (Admission Register) ನಿರ್ವಹಿಸುವುದು. ಹಾಗೂ ರೆಗ್ಯೂಲರ್ ವಿದ್ಯಾರ್ಥಿಗಳ ರೀತಿ ಎಲ್ಲಾ ವಿವರಗಳನ್ನು ದಾಖಲಿಸುವುದು.
4. ವಿದ್ಯಾರ್ಥಿಗಳಿಂದ ಪಡೆಯುವ ಮೂರು ಭಾವಚಿತ್ರಗಳಲ್ಲಿ ಎಸ್.ಎಸ್.ಎಲ್.ಸಿ. ಉತೀರ್ಣರಾದ ಸಂಸ್ಥೆಯ ಮುಖ್ಯೋಪಾಧ್ಯಾಯರಿಂದ /ಪ್ರಾಂಶುಪಾಲರಿಂದ ದೃಢೀಕರಿಸಲ್ಪಟ್ಟ ಫೋಟೋಗಳಲ್ಲಿ ಒಂದನ್ನು ದಾಖಲಾತಿ ಪುಸ್ತಕ (Admission Register) ದಲ್ಲಿ ಅಂಟಿಸಿ ವಿದ್ಯಾರ್ಥಿಯ ಸಹಿ ಪಡೆಯಬೇಕು. ದೃಢೀಕರಣವಿಲ್ಲದ ಫೋಟೋವನ್ನು ಅರ್ಜಿಯ ಮೇಲೆ ಅಂಟಿಸಬೇಕು ಹಾಗೂ Scan ಮಾಡಿ Online Upload ಮಾಡಬೇಕು.
5. ನೋಂದಣಿ ಸಮಯದಲ್ಲಿ ಅಭ್ಯರ್ಥಿಗಳಿಂದ ಪಡೆಯುವ ಮೂಲ ವರ್ಗಾವಣೆ ಪತ್ರ (Original Transfer Certificate) ಹಾಗೂ ಇನ್ನಿತರೆ ದಾಖಲೆಗಳ ಪ್ರತಿಗಳನ್ನು ಕಲಿಕಾ ಕೇಂದ್ರಗಳ (ಕಾಲೇಜು/ಶಾಲಾ) ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು /ಸಮನ್ವಯಾಧಿಕಾರಿಗಳು ಜೋಪಾನವಾಗಿ ಇಟ್ಟುಕೊಳ್ಳುವುದು, ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರವನ್ನು (Marks Card) ಮಾತ್ರ ಸಿನಿಯರ್ ಸೆಕೆಂಡರಿ {Senior Secondary (12ನೇ ತರಗತಿ)} ಗೆ ಪರೀಕ್ಷೆಯ ಪ್ರವೇಶ ಪತ್ರ ವಿತರಿಸಿದ ನಂತರ ವಿದ್ಯಾರ್ಥಿಗಳಿಗೆ ಹಿಂದರಿಗಿಸುವುದು ಕಲಿಕಾ ಕೇಂದ್ರದ ಪ್ರಾಂಶುಪಾಲರ / ಮುಖ್ಯೋಪಾಧ್ಯಾಯರ / ಸಮನ್ವಯಾಧಿಕಾರಿಗಳ ಪ್ರಮುಖ ಜವಾಬ್ದಾರಿಯಾಗಿರುತ್ತದೆ.

BHARATH INSTITUTE OF SCHOOLING EDUCATION(R) ★ Bangalore

6. ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟದ ಹಿತದೃಷ್ಟಿಯಿಂದ ಮತ್ತು ನಿರ್ವಹಣೆಯ ಕ್ರಮ ಬದ್ಧತೆಯ ಸಲುವಾಗಿ ಗೊಂದಲಗಳ ನಿವಾರಣೆಗಾಗಿ ಕಲಿಕಾ ಕೇಂದ್ರಗಳಲ್ಲಿ (ಕಾಲೇಜು/ಶಾಲಾ) ಗರಿಷ್ಠ 200 ಅಭ್ಯರ್ಥಿಗಳನ್ನು ಮಾತ್ರ ನೋಂದಾಯಿಸಿಕೊಳ್ಳಬಹುದು. ನಿಗದಿಪಡಿಸಿದ ಸಂಖ್ಯೆಗಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಳ್ಳುವ ಮುನ್ನ ಕಲಿಕಾ ಕೇಂದ್ರಗಳ ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು / ಸಮನ್ವಯಾಧಿಕಾರಿಗಳು BISE ಸಂಸ್ಥೆಯಿಂದ ಕಡ್ಡಾಯವಾಗಿ ಪೂರ್ವಾನುಮತಿ ಪಡೆದುಕೊಳ್ಳಬೇಕು.
7. ಅರ್ಜಿ ಹಾಗೂ ಶುಲ್ಕವನ್ನು ಸ್ವೀಕರಿಸುವಾಗ ಮೂಲ ದಾಖಲೆ ಪತ್ರಗಳನ್ನು ಪರಿಶೀಲಿಸಿ ಅರ್ಹ ವಿದ್ಯಾರ್ಥಿಗಳನ್ನು ಮಾತ್ರ ಸಿನಿಯರ್ ಸೆಕೆಂಡರಿ {Senior Secondary (12ನೇ ತರಗತಿ)} ಗೆ ಪರೀಕ್ಷೆಗೆ ನೋಂದಾಯಿಸಿಕೊಳ್ಳುವುದು.
8. ಎಸ್.ಎಸ್.ಎಲ್.ಸಿ. ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲಿಸುವ ಜವಾಬ್ದಾರಿ, (ಕಾಲೇಜು/ಶಾಲಾ) ಕಲಿಕಾ ಕೇಂದ್ರಗಳ ಪ್ರಾಂಶುಪಾಲರ /ಸಮನ್ವಯಾಧಿಕಾರಿಗಳ ಪೂರ್ಣ ಜವಾಬ್ದಾರಿಯಾಗಿರುತ್ತದೆ. ಮೂಲ ಪ್ರಮಾಣ ಪತ್ರಗಳನ್ನು ಖುದ್ದಾಗಿ ಪರಿಶೀಲಿಸಿ ನೈಜತೆಯನ್ನು ಖಚಿತಪಡಿಸಿಕೊಂಡ ನಂತರ ನೋಂದಾಯಿಸಿಕೊಳ್ಳುವುದು. ದ್ವಿಪ್ರತಿ ವರ್ಗಾವಣೆ ಪತ್ರದ (DUPLICATE TC) ಆಧಾರದ ಮೇಲೆ ನೋಂದಾಯಿಸಿಕೊಂಡಲ್ಲಿ ಅಂತಹ ವಿದ್ಯಾರ್ಥಿಗಳ ನೋಂದಣಿಯನ್ನು ರದ್ದುಪಡಿಸಲಾಗುವುದು ಹಾಗೂ ಪ್ರಾಂಶುಪಾಲರ / ಮುಖ್ಯೋಪಾಧ್ಯಾಯರ/ ಸಮನ್ವಯಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಹಾಗೂ ವಿದ್ಯಾರ್ಥಿಗಳಿಗೆ ಆಗುವ ನಷ್ಟಕ್ಕೆ (ಕಾಲೇಜು/ಶಾಲಾ) ಕಲಿಕಾ ಕೇಂದ್ರಗಳ ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು /ಸಮನ್ವಯಾಧಿಕಾರಿಗಳು ಪೂರ್ಣ ಜವಾಬ್ದಾರರಾಗಿರುತ್ತಾರೆ.
9. ತಿರಸ್ಕರಿಸಲಾದ ವಿದ್ಯಾರ್ಥಿಗಳ ಅರ್ಜಿಗಳ ವಿವರಗಳನ್ನು ಕಲಿಕಾ ಕೇಂದ್ರಗಳ (ಕಾಲೇಜು/ಶಾಲಾ) ಪ್ರಾಂಶುಪಾಲರ/ ಮುಖ್ಯೋಪಾಧ್ಯಾಯರ/ ಸಮನ್ವಯಾಧಿಕಾರಿಗಳ ಗಮನಕ್ಕೆ ತರಲಾಗುವುದು.
10. ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ), ಬೆಂಗಳೂರು ಸಂಸ್ಥೆಯ ಕೇಂದ್ರ ಕಛೇರಿಯಿಂದ ತಪಾಸಣೆ ಮಾಡಲು ಬಂದ ಅಧಿಕಾರಿಗಳಿಗೆ ಪರಿಶೀಲನೆಗಾಗಿ ಮೂಲ ದಾಖಲೆಗಳನ್ನು ಒದಗಿಸುವುದು ಹಾಗೂ ಪೂರ್ಣ ಪ್ರಮಾಣದ ಸಹಕಾರವನ್ನು ನೀಡುವುದು ಕಲಿಕಾ ಕೇಂದ್ರಗಳ (ಕಾಲೇಜು/ ಶಾಲೆಗಳ) ಪ್ರಾಂಶುಪಾಲರ/ ಮುಖ್ಯೋಪಾಧ್ಯಾಯರ /ಸಮನ್ವಯಾಧಿಕಾರಿಗಳ ಪೂರ್ಣ ಜವಾಬ್ದಾರಿಯಾಗಿರುತ್ತದೆ.

## V. ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ) (BISE) ಬೆಂಗಳೂರು ಅಡಿಯಲ್ಲಿನ ಕಲಿಕಾ ಕೇಂದ್ರಗಳಲ್ಲಿ ಪರೀಕ್ಷೆಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳ ವಿವರ.

1. ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು (BISE) ಅಡಿಯಲ್ಲಿ ಕಲಿಕಾ ಕೇಂದ್ರಗಳನ್ನು ತೆರೆಯಲು ಆಸಕ್ತ ಕಾಲೇಜು/ಶಾಲಾ /ಕಲಿಕಾ ಕೇಂದ್ರದ ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು/ ಸಮನ್ವಯಾಧಿಕಾರಿಗಳು ಅರ್ಜಿ ನೀಡಲು/ ಸ್ವೀಕರಿಸಲು ಅವಕಾಶವಿರುತ್ತದೆ.
2. ಕಾಲೇಜು / ಶಾಲಾ ಕಲಿಕಾ ಕೇಂದ್ರದ ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು/ ಸಮನ್ವಯಾಧಿಕಾರಿಗಳು ಕಲಿಕಾ ಕೇಂದ್ರ ತೆರೆಯಲು Tie-up College ಪತ್ರದೊಂದಿಗೆ ನಿಗದಿ ಪಡಿಸಿರುವ ಇತರೆ ಪೂರಕ ದಾಖಲೆಗಳೊಂದಿಗೆ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು ಸಂಸ್ಥೆಯ ಕೇಂದ್ರ ಕಛೇರಿಗೆ ಸಲ್ಲಿಸಬೇಕು.
3. ಆಸಕ್ತ ಕಲಿಕಾ ಕೇಂದ್ರದ ಪ್ರಾಂಶುಪಾಲರು /ಮುಖ್ಯೋಪಾಧ್ಯಾಯರು / ಸಮನ್ವಯಾಧಿಕಾರಿಗಳು ಕಲಿಕಾ ಕೇಂದ್ರ ತೆರೆಯಲು ಸಲ್ಲಿಸಿದ Tie- up College ಪತ್ರದಂತೆ, ಪೂರಕ ದಾಖಲೆಗಳು, ಮೂಲಭೂತ ಸೌಕರ್ಯಗಳು ಇರುವುದರ ಬಗ್ಗೆ ಖಾತರಿ ಪಡಿಸಿಕೊಂಡು, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿಕೊಂಡು ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ) ಸಂಸ್ಥೆಯ ಗೌರ್ನಿಂಗ್ ಕೌನ್ಸಿಲ್ ಮುಂದೆ ಅನುಮೋದನೆ ಪಡೆದ ಅನುಮೋದಿತ (ಕಾಲೇಜು/ ಶಾಲಾ) ಕೇಂದ್ರಗಳಿಗೆ ಕಲಿಕಾ ಕೇಂದ್ರ ನೀಡಲಾಗುವುದು.
4. ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಕಲಿಕಾ ಕೇಂದ್ರದ ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು/ ಸಮನ್ವಯಾಧಿಕಾರಿಗಳು ಕಲಿಕಾ ಸಾಮಗ್ರಿಗಳನ್ನು ಸಂಪರ್ಕ ತರಗತಿಗಳು

BHARATH INSTITUTE OF SCHOOLING EDUCATION(R) ★ Bangalore

5. ಪ್ರಾರಂಭವಾಗುವ ಮೊದಲು BISE ಸಂಸ್ಥೆಯಿಂದ ಪಡೆದು ವಿದ್ಯಾರ್ಥಿಗಳಿಗೆ ವಿತರಿಸವುದು ಕಡ್ಡಾಯವಾಗಿರುತ್ತದೆ.
6. ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು ಸಂಸ್ಥೆಯಿಂದ ಮಾನ್ಯತೆ ಪಡೆದುಕೊಂಡ (ಕಾಲೇಜು /ಶಾಲಾ)ಕಲಿಕಾ ಕೇಂದ್ರದ ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು/ ಸಮನ್ವಯಾಧಿಕಾರಿಗಳು ತಮ್ಮ ಕಲಿಕಾ ಕೇಂದ್ರಗಳಲ್ಲಿ ದಾಖಲಾದ / ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ನ್ಯಾಮಿನಲ್ ರೋಲ್ ಗಳನ್ನು BISE ಕೇಂದ್ರ ಕಛೇರಿಗೆ **2023 - 2024** ನೇ ಸಾಲಿನ ಶೈಕ್ಷಣಿಕಾ ವೇಳಾಪಟ್ಟಿಯಂತೆ (Calendar of Events) ನಿಗದಿತ ದಿನಾಂಕಗಳಲ್ಲಿ ಸಲ್ಲಿಸಿ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.
7. ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು ಸಂಸ್ಥೆಯ ಅಡಿಯಲ್ಲಿ ಮಾನ್ಯತೆ ಪಡೆದ ಕಲಿಕಾ ಕೇಂದ್ರಗಳ ಕಾಲೇಜು /ಶಾಲಾ / ಕಲಿಕಾ ಕೇಂದ್ರದ ಪ್ರಾಂಶುಪಾಲರು /ಮುಖ್ಯೋಪಾಧ್ಯಾಯರು/ ಸಮನ್ವಯಾಧಿಕಾರಿಗಳು ತಮ್ಮ ಕಲಿಕಾ ಕೇಂದ್ರಗಳಲ್ಲಿ ದಾಖಲಾದ, BISE ಕೇಂದ್ರ ಕಛೇರಿಯಿಂದ ಅನುಮೋದಿತ ವಿದ್ಯಾರ್ಥಿಗಳ Nominal Roll ನ ಅನುಸಾರ ಅನುಮೋದಿತ ವಿದ್ಯಾರ್ಥಿಗಳಿಗೆ ನಿಗಧಿತ ಸಂಖ್ಯೆಯ ಸಂಪರ್ಕ ತರಗತಿ (Contact Class) ನೀಡಲು ನಿರ್ಧರಿಸಿರುವ ವೇಳಾಪಟ್ಟಿಯನ್ನು BISE ಯಿಂದ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.
8. ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು ಸಂಸ್ಥೆಯಿಂದ ಅನುಮೋದನೆ ಪಡೆದುಕೊಂಡ ಸಂಪರ್ಕ ತರಬೇತಿಯ ವೇಳಾಪಟ್ಟಿಯಂತೆ ಕಲಿಕಾ ಕೇಂದ್ರಗಳಲ್ಲಿ ದಾಖಲಾದ /ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಸಂಪರ್ಕ ತರಗತಿಗಳನ್ನು ನಡೆಸುವುದು ಕಲಿಕಾ ಕೇಂದ್ರದ ಪ್ರಾಂಶುಪಾಲರ / ಮುಖ್ಯೋಪಾಧ್ಯಾಯರ/ ಸಮನ್ವಯಾಧಿಕಾರಿಗಳ ಪ್ರಥಮ ಆದ್ಯ ಕರ್ತವ್ಯವಾಗಿರುತ್ತದೆ.
9. ವಿದ್ಯಾರ್ಥಿಗಳಿಗೆ ನೀಡಿದ Contact Classes, Assignment, Class Interaction ಗಳ ಕ್ರೂಡೀಕೃತ ಅಂಕಗಳನ್ನು Online ನಲ್ಲಿ ದಾಖಲಿಸಿ ಅದಕ್ಕೆ ಸಂಬಂಧಿಸಿದ ಪೂರಕ ದಾಖಲೆಗಳನ್ನು BISE ಕೇಂದ್ರ ಕಛೇರಿಗೆ ನಿಗಧಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು.
10. ಕಲಿಕಾ ಕೇಂದ್ರಗಳ (ಕಾಲೇಜುಗಳ / ಶಾಲಾ) ಮೂಲಕ ಪರೀಕ್ಷೆ ತೆಗೆದು ಕೊಳ್ಳುವ ಪ್ರತಿಯೊಬ್ಬ ವಿದ್ಯಾರ್ಥಿಯ ಮಾಹಿತಿಯನ್ನು ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು ಸಂಸ್ಥೆಯ Online Portal ನಲ್ಲಿ ಭರ್ತಿಮಾಡಿ Upload ಮಾಡುವುದು ಕಲಿಕಾ ಕೇಂದ್ರಗಳ ಪ್ರಾಂಶುಪಾಲರ / ಮುಖ್ಯೋಪಾಧ್ಯಾಯರ/ ಸಮನ್ವಯಾಧಿಕಾರಿಗಳ ಕಡ್ಡಾಯ ಕರ್ತವ್ಯವಾಗಿರುತ್ತದೆ. ನಿಯಮಾನುಸಾರ ದಾಖಲೆಗಳನ್ನು ಸಲ್ಲಿಸುವುದರ ಜೊತೆಗೆ Upload ಮಾಡಿದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ಪತ್ರಗಳನ್ನು ನೀಡಲಾಗುವುದು.
11. ಪರೀಕ್ಷ ಶುಲ್ಕವನ್ನು ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್ (ರಿ) ಬೆಂಗಳೂರು ಸಂಸ್ಥೆಯ ಕೇಂದ್ರ ಕಚೇರಿಯ BANK OF BARODA ಖಾತೆಗೆ A/C NO. 74560200000340, IFSC CODE: BARB0VJMHBA, MADANAYAKANAHALLI, BANGALORE ಶಾಖೆಗೆ Online ಮೂಲಕ ಜಮಾ ಮಾಡುವುದು.

**ಎಲ್ಲರ ಗಮನಕ್ಕೆ (Important Note)**

- **BISE** ಸಂಸ್ಥೆಯ ಮೂಲಕ ದಾಖಲಾದ ವಿದ್ಯಾರ್ಥಿಗಳ ಮಾಹಿತಿ ಮತ್ತು ಉತ್ತೀರ್ಣತೆಗೆ ಸಂಬಂಧಿಸಿದಂತಹ ಪ್ರಮಾಣ ಪತ್ರಗಳನ್ನು **Digi Locker** ನಲ್ಲಿ ದಾಖಲಿಸಲಾಗುತ್ತದೆ. ತಮ್ಮ ಪ್ರಮಾಣ ಪತ್ರದ ನೈಜತೆಯನ್ನು ಎಲ್ಲಾ ವಿದ್ಯಾರ್ಥಿಗಳು ಮತ್ತು ಪೋಷಕರು ಖಚಿತಪಡಿಸಿಕೊಳ್ಳಬಹುದಾಗಿದೆ.

BHARATH INSTITUTE OF SCHOOLING EDUCATION (R) ★ Bangalore

- ಕಾಲ ಕಾಲಕ್ಕೆ ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ) ಬೆಂಗಳೂರು ಸಂಸ್ಥೆಯು ಹೊರಡಿಸುವ ಮಾಹಿತಿಯನ್ನು BISE ಸಂಸ್ಥೆಯ ಅಂತರ್ಜಾಲದಲ್ಲಿಯೂ ಪ್ರಕಟಿಸಲಾಗುವುದು ಸದಾ ಮಾಹಿತಿಯನ್ನು ಸಂಸ್ಥೆಯ ಅಂತರ್ಜಾಲವನ್ನು ಸಂಪರ್ಕಿಸುವುದರ ಮೂಲಕ ಖಚಿತಪಡಿಸಿಕೊಳ್ಳುವುದು ಹಾಗೂ ಅದರಂತೆ ಕ್ರಮವಹಿಸುವುದು
- ಹೆಚ್ಚಿನ ಮಾಹಿತಿಗಾಗಿ ಕೇಂದ್ರ ಕಛೇರಿಯ ಅಂತರ್ಜಾಲ ವಿಳಾಸ **www.bise.edu.in** ಗೆ ಹಾಗೂ ದೂರವಾಣಿ ಸಂಖ್ಯೆ **+919513855009 / +919513585009** ಗೆ ಸಂಪರ್ಕಿಸಬಹುದು.

Smrijula

**ವ್ಯವಸ್ಥಾಪಕ ನಿರ್ದೇಶಕರು**

ವ್ಯವಸ್ಥಾಪಕ ನಿರ್ದೇಶಕರು
ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್(ರಿ)
ಬೆಂಗಳೂರು

**ಪ್ರತಿಗಳು: ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.**

1. ಭಾರತ್ ಇನ್ಸ್ಟಿಟ್ಯೂಟ್ ಆಫ್ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು ಸಂಸ್ಥೆಯ ಅಡಿಯಲ್ಲಿ ಮಾನ್ಯತೆ ಪಡೆದ ರಾಜ್ಯದ ಎಲ್ಲಾ ಕಲಿಕಾ (ಕಾಲೇಜು /ಶಾಲಾ) ಕೇಂದ್ರಗಳ ಪ್ರಾಂಶುಪಾಲರು / ಮುಖ್ಯೋಪಾಧ್ಯಯರು / ಸಮನ್ವಯಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಭಾರತ್ ಇನ್ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು ಸಂಸ್ಥೆಯ ಅಡಿಯಲ್ಲಿನ ಜಿಲ್ಲಾ/ ವಿಭಾಗಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ,
3. ಪ್ರಾಂಶುಪಾಲರು / ಡೀನ್‌ರವರು, ಭಾರತ್ ಇನ್ಸ್ಟಿಟ್ಯೂಟ್ ಆಫ್ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
4. ಗೌರ್ನಿಂಗ್ ಕೌನ್ಸಿಲ್, ಭಾರತ್ ಇನ್ಸ್ಟಿಟ್ಯೂಟ್ ಆಫ್ಸ್ಕೂಲಿಂಗ್ ಎಜುಕೇಶನ್ (ರಿ) ಬೆಂಗಳೂರು ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ,
5. ಕಛೇರಿ ಪ್ರತಿ/ಶಾಖಾ ಕಡತ